## ಬಡತನ ಮುಕ್ತ – ಜೀವನೋಪಾಯ ಮತ್ತು ಕೌಶಲ್ಯಾಭಿವೃದ್ಧಿ ವಲಯಕ್ಕೆ ಸಂಬಂಧಿಸಿದಂತೆ ವಿಷಯಾಧಾರಿತ ಗುಂಪು ಚರ್ಚೆಯ ಸಲಹಾ ರೂಪದ ಪ್ರಶ್ನಾವಳಿಗಳು

1. ಬಡತನ ಎಂದರೇನು?
2. ಬಡತನಕ್ಕೆ ಕಾರಣಗಳೇನು?
3. ನಿಮ್ಮ ಗ್ರಾಮದಲ್ಲಿ ಬಡತನದಿಂದ ಹೊರ ಬರಲು ಏನು ಮಾಡಬಹುದು?
4. ನಿಮ್ಮ ಗ್ರಾಮದಲ್ಲಿ ಬಡನತದಿಂದ ಬಳಲುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು?
5. ಕಚ್ಚಾ ಮನೆಗಳಲ್ಲಿ ಯಾವುದಾದರೂ ಕುಟುಂಬಗಳು ವಾಸಿಸುತ್ತಿವೆಯೇ? ಮತ್ತು ಏಕೆ?
6. ತಮ್ಮ ಗ್ರಾಮದಲ್ಲಿ ಸ್ವ ಸಹಾಯ ಸಂಘಗಳು ಇವೆಯೇ? ಇದ್ದರೆ ಎಷ್ಟು ಕುಟುಂಬಗಳು ಸೇರ್ಪಡೆಗೊಂಡಿವೆ?
7. ತಮ್ಮ ಗ್ರಾಮದಲ್ಲಿ ಸ್ವ ಸಹಾಯ ಸಂಘಗಳು ಯಾವ ಯಾವ ರೀತಿಯ ಆದಾಯೋತ್ಪನ್ನ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ?
8. ನಿಮ್ಮ ಗ್ರಾಮದಲ್ಲಿ ಯುವಕ ಯುವತಿಯರು ಯಾವ ಯಾವ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಎಷ್ಟು ಜನ ಪಡೆದುಕೊಂಡಿದ್ದಾರೆ?
9. ನಿಮ್ಮ ಗ್ರಾಮದಲ್ಲಿ ಕೌಶಲ್ಯಾಭಿವೃದ್ಧಿ ತರಬೇತಿ ಪಡೆದುಕೊಂಡು ಉದ್ಯೋಗ ಅಥವಾ ಸ್ವಯಂ ಉದ್ಯೋಗ ಏನಾದರೂ ?
10. ಮಾರುಕಟ್ಟೆ ವ್ಯವಸ್ಥೆ ಹೇಗಿದೆ?
11. ನಿಮ್ಮ ಗ್ರಾಮದಲ್ಲಿ ಕೃಷಿ ಚಟುವಟಿಕೆ ಹೇಗಿದೆ?
12. ಉಳುಮೆ ಮಾಡದಿರುವ ಭೂಮಿ ಏನಾದರೂ ಇದೆಯೇ?
13. ಕೃಷಿ ಮತ್ತು ಹೈನುಗಾರಿಕೆಯಲ್ಲಿ ಇಳುವರಿ ಪ್ರಮಾಣ ಹೇಗಿದೆ? ಉತ್ತಮ ಪಡಿಸಲು ಏನು ಮಾಡಬಹುದು?
14. ಕೆಲಸದಲ್ಲಿ ತೊಡಗಿಸಿಕೊಳ್ಳುವಿಕೆಯಲ್ಲಿ ಮಹಿಳೆಯರ ಸ್ಥಿತಿ ಹೇಗಿದೆ?
15. ನಿಮ್ಮ ಗ್ರಾಮದಲ್ಲಿ ಕೆಲಸದಲ್ಲಿ ತೊಡಗಿ ಕೊಳ್ಳಲು ಮಹಿಳೆಯರಿಗೆ ಇರುವ ಸವಾಲುಗಳೇನು?

**ಗುಂಪು ಚರ್ಚೆಯಲ್ಲಿ ಭಾಗವಹಿಸಬಹುದಾದ ಭಾಗೀದಾರರುಗಳು:**

1. ಸ್ವ ಸಹಾಯ ಸಂಘ / ಜಿಪಿಎಲ್ಎಫ್‌ನ ಸದಸ್ಯರುಗಳು
2. ರೈತರು, ಯುವಕರು
3. ಎಫ್‌ಪಿಓ ಗುಂಪಿನ ಸದಸ್ಯರು
4. ಕ್ಷೇತ್ರ ಮಟ್ಟದ ಅಧಿಕಾರಿ / ಸಿಬ್ಬಂದಿಗಳು
5. ಸಂಬಂಧಿಸಿದ ಸ್ಥಾಯಿ ಮತ್ತು ಉಪಸಮಿತಿ ಸದಸ್ಯರುಗಳು

**ಸೂಚನೆ:**

1. ಚರ್ಚೆಯ ವಿಷಯವನ್ನು ಪರಿಚಯಿಸಿ, ಪೂರಕ ವಾತಾವರಣವನ್ನು ಖಚಿತಪಡಿಸಿಕೊಳ್ಳುವುದು.
2. ಚರ್ಚೆಯನ್ನು ತೆರೆದ ಪ್ರಶ್ನೆಗಳೊಂದಿಗೆ ಪ್ರಾರಂಭಿಸುವುದು.
3. ಒಂದು ವೇಳೆ ಚರ್ಚೆಯಲ್ಲಿ ಉತ್ತರಗಳು ಸಾಮಾನ್ಯವಾಗಿದ್ದರೆ (General), ನಿರ್ದಿಷ್ಠ ಸಮಸ್ಯೆ ಮತ್ತು ಪರಿಹಾರಗಳನ್ನು ಪಡೆಯುವ ನಿಟ್ಟಿನಲ್ಲಿ ಚರ್ಚೆಯನ್ನು ಸುಗಮಗಾರಿಕೆ ಮಾಡುವುದು.
4. ವೈಯಕ್ತಿಕ ಮತ್ತು ಸೂಕ್ಷ್ಮ ವಿಷಯಗಳ ಕುರಿತು ಚರ್ಚಿಸಬಾರದು.
5. ಚರ್ಚೆಯ ಸಂದರ್ಭದಲ್ಲಿ ವ್ಯಕ್ತವಾಗುವ ವಿಶೇಷ ಅಂಶಗಳನ್ನು ಗುಂಪಿನಲ್ಲಿ ಮತ್ತೊಮ್ಮೆ ಸ್ಪಷ್ಟಪಡಿಸಿಕೊಳ್ಳುವುದು.
6. ಸ್ವೀಕರಾರ್ಹತೆ, ಮುಕ್ತ ಮನಸ್ಸಿನಿಂದ ಹಾಗು ತಟಸ್ಥ ನಿಲುವಿನೊಂದಿಗೆ ಚರ್ಚೆಯನ್ನು ನಡೆಸುವುದು.
7. ವಿಷಯಾಧಾರಿತ ಗುಂಪು ಚರ್ಚೆಯನ್ನು ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ನಡೆಸುವುದು ಹೆಚ್ಚು ಸೂಕ್ತ.
8. ಸಹವರ್ತಿ ಗುಂಪನ್ನು ಕಾಯ್ದುಕೊಳ್ಳುವುದು.

ಅನಸಾರಾಗ್ರಾ&ಪಂರಾಸಂ